ಮೂಲೆಯಲ್ಲಿದ್ದ ಬಣವೆಯ ಗಳಗಳು ಮಣ್ಣು ತಿಂದಿದ್ದವು. ಅವುಗಳ ತಳಕ್ಕಾಕಿದ್ದ ಕಲ್ಲು ದುಂಡಿಗಳ ಸುತ್ತ ಕಳೆ ಬೆಳಕಂಡು ಮುಚ್ಕೋಗಿದ್ದವು. ಚಪ್ಪರದವರೆಯ ಚಪ್ಪರವೂ ನೆಲ ಕಚ್ಚಿತ್ತು. ಪರಂಗಿ ಗಿಡದ ನೆತ್ತಿಯಲ್ಲಿ ಮುಷ್ಟಿ ಗಾತ್ರದ ಮೂರು ಮತ್ತೊಂದು ಕಾಯಿ ನೇತಾಡುತ್ತಿದ್ದವು. ಬೇಲಿಯಾಚೆಗಿದ್ದ ಗೊಣ್ಣೆಹಣ್ಣಿನ ಮರ ಎಂದಿನಂತೆ ಹಸಿರು ಕಕ್ಕುತ್ತಿತ್ತು. ಅದರ ಮೈ ತುಂಬಿಕೊಂಡಿದ್ದ ಪುಟಾಣಿ ಹಣ್ಣುಗಳು ಮಿರುಗುಟ್ಟುತ್ತಿದ್ದವು. ಅದರಾಚೆಗಿನ ಹೊಲಮಾಳ ಬಟಾಬಯಲಾಗಿತ್ತು.

ಮನೆಯ ಬೀಗವನ್ನು ಬಿಚ್ಚಿ ಒಳ ಹೋದರೆ ಕಸ ರಾಶಿಯಾಗಿತ್ತು. ಇಲಿಗಳು ಕೊರೆದಿದ್ದ ಬಿಲದ ತುದಿಗಳಲ್ಲಿ ಮಂಕರಿಗಟ್ಟಲೆ ಮಣ್ಣು ಕೂತಿತ್ತು. ಮನೆಯಗಲಕೂ ಇಲಿ ಪಿಚಿಕೆಗಳು ಇಟ್ಬಾಡಿ, ಮನೆಯಂಥ ಮನೆಯೆಲ್ಲಾ ಸಿಂಡೊಡೆಯುತ್ತಿತ್ತು. ದೇವರ ಪಟಗಳ ಮೇಲೆ ಜಾಡ ಹೆಣೆದಿದ್ದ ಬಲೆಗಳಿಗೆ ಸಿಕ್ಕಾಕಿಕೊಂಡಿದ್ದ ನೊಣಗಳು ನಿಗುತುಕೊಂಡಿದ್ದವು. ತಲೆಬಾಗಿಲಿನಲ್ಲಿದ್ದ ಅಂಕಾಲೆ ಕಡ್ಡಿಗೆ ನೇತಾಕಿದ್ದ ಕಟ್ಟಳೆಕಾಯಿಯ ಒಂದೆಡೆಯ ಹಗ್ಗ ಹರುಕಂಡು ಅದು ಸೊಟ್ಟಗೆ ನೇತಾಡುತ್ತಿತ್ತು.

ಚಿಕ್ಕಸವ ದೊಡ್ಡದೊಡ್ಡ ಕಸವನ್ನು ಒಪ್ಪ ಮಾಡಿ ಜಗಲಿಯಲ್ಲಿ ಕೂರುವಾಗ ಸಂಜೆಯಾಗಿತ್ತು. ಅಲ್ಲಿ ಬಿಡುವಿನಲ್ಲಿ ಅಪ್ಪನೊಂದಿಗೆ ಆಡುತ್ತಿದ್ದ ಆನೆ ಆಟ ಹಾಗೂ ಚೌಕಾಬಾರದ ಗೆರೆಗಳು ಮುಕ್ಕಾಗದೆ ಹಾಗೇ ಇದ್ದವು. ಕರವುಗಲ್ಲಿಗೆ ಸೊಪ್ಪು ಕಟ್ಟುವ, ಬುಗುರಿ ಮರದ ಬುಡಕ್ಕೆ ಕೆಂಪು ಬಿಳಿ ನಾಮಗಳನ್ನು ಬಳಿಯುವುದರಲ್ಲಿ, ಗುಡಿಯ ಎದುರಿಗೆ ತೋರಣ ಕಟ್ಟುವುದರಲ್ಲಿ ಗುಂಪೊಂದು ಚೂಟಿಯಾಗಿತ್ತು. ಅವುಗಳನ್ನೆಲ್ಲಾ ಅಚ್ಚರಿಯಲ್ಲಿ ಮಕ್ಕಳ ಗುಂಪೊಂದು ಕಣ್ತುಂಬಿಕೊಳ್ಳುತ್ತಿತ್ತು. ಜಾತ್ರೆಗಾಗಿ ಎಡತಾಕುತ್ತಿದ್ದ ನೆಂಟರಿಷ್ಟರುಗಳಿಂದ ಹಳ್ಳಿಯ ಜೀವ ಜೀಕುತ್ತಿತ್ತು.

ಒಂದಷ್ಟೊತ್ತು ಹಾಗೇ ಕೂತಿದ್ದ ಚಿಕ್ಕಸವ ಇದ್ದಕ್ಕಿದ್ದಂತೆ ಎದ್ದು ಶಾಸ್ತ್ರದ ಮಳ್ಳಜ್ಜನ ಮನೆಯತ್ತ ಹೊರಟ. ಊರಿಂದ ಫರ್ಲಾಂಗು ದೂರದಲ್ಲಿ ಹೊಲದ ನಡುವಿದ್ದ ಮನೆ ಹತ್ತಿರವಾಗುತ್ತಲೇ ನಾಯೊಂದು ಗಲಾಟೆಗಿಕ್ಕಿಕೊಂಡಿತು. ಅದರ ಹಿಂದೆಯೇ, 'ಯಾರ್ಲಾ ಅಪ್ಪಣ್ಣಿ ಅದು' ಅಂತ ಅನ್ನುತ್ತಾ ಮಳ್ಳಜ್ಜನೇ ಮನೆಯಿಂದಾಚೆ ಬಂದ. ತೊಂಬತ್ತರ ಆಸುಪಾಸಿನಲ್ಲಿದ್ದ ಮಳ್ಳಜ್ಜ, 'ಮಗ ಯಾರಪ್ಪ ನೀನು ನಂಗಂತೂ ಗುರ್ತು ಹತ್ತುವಲ್ದು' ಅಂತ ಚಿಕ್ಕಸವನನ್ನೇ ದಿಟ್ಟಿಸಿದ. 'ನಾನು ಚಿಕ್ಕಸವ ಕಣಜ್ಜ' ಅನ್ನುತ್ತಾ ನಿಂತಿದ್ದ ಚಿಕ್ಕಸವನ ಹತ್ತಿರಕ್ಕೆ ಹೋಗಿ, 'ಅಯ್ಯೋ ನಮ್ಮ ಕಾಡ್ಕೋಳಿ ಕಾಟ್ಮಾರಿ ಮಗಲ್ವಾ' ಅನ್ನುತ್ತಲೇ ಅವನನ್ನು ಒಳ ಕರೆದೊಯ್ದು ಮಂದ್ಲಿಕೆ ಚಾಪೆಯಲ್ಲಿ ಕೂರಿಸಿದ. ಮಳ್ಳಜ್ಜನ ಹೆಂಡತಿ ದಿವಾನೊಂದರಲ್ಲಿ ಮಲಗಿ ಜೊಂಪಾರಿಸುತ್ತಿತ್ತು. ಚಿಕ್ಕಸವ ತಾನು ಬಂದ ಕಾರಣವನ್ನು ಅರುಹುತ್ತಲೇ, ಮಳ್ಳಜ್ಜ ತನ್ನ ದಪ್ಪ ಗಾಜಿನ ಕನ್ನಡಕವನ್ನು ತಾನುಟ್ಟಿದ್ದ ದಟ್ಟಿಯಂಚಿಂದ ವರೆಸಿ ಹಾಕಿಕೊಂಡು, ಪುಟ್ಟ ಖಾನಿಯಿಂದ ಕವಡೆಯ ಗಂಟನ್ನೆತ್ತಿ ಬಿಚ್ಚಿಕೊಂಡು, ಎರಡೂ ಕೈಗಳಿಂದ ಕುಲುಕುತ್ತಾ ಹತ್ತಾರು ಬಾರಿ ಚಾಪೆಯ ಮೇಲಾಡಿಸಿ ನಿಟ್ಟುಸಿರಾದ. ಅದ ಕಂಡ ಚಿಕ್ಕಸವ ತಳಮಳಗೊಂಡ.

'ಕಾಡ್ಕೋಳೀನಾ ತಗಂಡೋಗಿ ನಾಡಿಗ್ ಬಿಟ್ಟು ಆಡ್ಕೋ ಅಂದ್ರೆ ಹೆಂಗೇಳು' ಅನ್ನುತ್ತಾ ಕಡೆಯ ಸಾರ್ತಿ ಎಂಬಂತೆ ಎರಡೂ ಹಸ್ತಗಳ ನಡುವೆ ಕವಡೆಗಳನ್ನು ಕೂರಿಸಿಕೊಂಡು, ಜೋಡಿಸಿದ ಹಸ್ತಗಳನ್ನು ಮುಖದ ಹತ್ತಿರಕ್ಕೆ ತಂದುಕೊಂಡು, ಕಣ್ಮುಚ್ಚಿ ಪಿಟಿಗುಡುತ್ತಾ ಮತ್ತೆ ಚಾಪೆಯ ಮೇಲುರುಳಿಸಿದ. 'ಎಲ್ಲಾ ಮಬ್ಮಬ್ಬು, ಯಾವ್ದೂ ನಿಚ್ಚಳ್ವಾಗಿಲ್ಲ, ದೇವ್ರೇ ಕಾಪಾಡ್ಬೇಕು' ಅಂದವನೇ ಮೌನಿಯಾಗಿಬಿಟ್ಟ. ಚಿಕ್ಕಸವ ಕಾದೇ ಕಾದ. ಮಳ್ಳಜ್ಜ ಮೌನ ಮುರಿಯದ್ದ ಕಂಡು ಇನ್ನೇನು ಹೊರಡಬೇಕು ಅನ್ನುವಷ್ಟರಲ್ಲಿ ಮನೆಯ ಹಿಂಬದಿಯ ಬಾರೆಯಿಂದ ಕಾಡುಕೋಳಿಯ ಕೂಗೊಂದು ಇರುಳ ನೀರವತೆಯಲ್ಲಿ ಇಬ್ಬರ ಕಿವಿಗಳಿಗೂ ಅಪ್ಪಳಿಸತೊಡಗಿತು. ಆ ಕೂಗಿನೊಳಗಿನ ಗುಟ್ಟನ್ನರಿತವನಂತೆ, 'ಅಗಾ ನೋಡು ಕಾಡ್ಕೋಳಿ ಕೂಗ್ತಾಯ್ತೆ, ನನ್ ಮಡ್ಳಿಗೆ ತಂದಾಕು ಅಂತಾಯ್ತೆ' ಒಂದೇ ಉಸುರಿಗೆ ಅಂದ ಮಳ್ಳಜ್ಜ ಮತ್ತೆ ಮೌನಿಯಾದ. ಚಿಕ್ಕಸವನಿಗೆ ಅವುಗಳ ತಲೆಬುಡ ತಿಳಿಯದೆ ಎದ್ದು ಹೊರಟ. ಗವ್ಗತ್ತಲಾಗಿತ್ತು.